# ರಂಗಭೂಮಿ ಮತ್ತು ಚಳುವಳಿ

**ರವೀಂದ್ರ ಕೆ. ವಿ.**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ ಆವರಣ–560056.

ಮಾನವನು ಒಂದು ಕಡೆ ನೆಲೆ ನಿಂತು ಕೃಷಿಯನ್ನು ಅವಲಂಬಿಸಿ ಜೀವನವನ್ನು ಸಾಗಿಸಲು ಪ್ರಯತ್ನಿಸಿದ ನಂತರ ತನ್ನ ದಣಿವು ಮತ್ತು ಆಯಾಸವನ್ನು ಮರೆಯಲು ರಾತ್ರಿ ಸಮಯದಲ್ಲಿ ಹಾಡುಗಳನ್ನು ಹಾಡುವುದರ ಜೊತೆಗೆ ನಾಟಕಗಳನ್ನು ಅಭಿನಯಿಸುತ್ತಿದ್ದರು. ಮಾನವನು ತನ್ನ ಸುತ್ತಮುತ್ತಲಿನ ಜನರ ಜೊತೆ ಸಂಬಂಧವನ್ನು ಬೆಸೆಯಲು ಹಾಗೂ ತನ್ನ ಶ್ರೀಮಂತಿಕೆಯನ್ನು ತೋರಿಸಿಕೊಳ್ಳಲು ದೇವಾಲಯಗಳನ್ನು ಕಟ್ಟಿಸಿದ್ದಲ್ಲದೆ ಜಾತ್ರೆ ಮತ್ತು ಆಚರಣೆಗಳನ್ನು ಧರ್ಮ ಹಾಗೂ ಜಾತಿಯ ಹಿನ್ನೆಲೆಯಲ್ಲಿ ರೂಢಿಸಿಕೊಂಡರು. ಆಚರಣೆಯ ಸಂದರ್ಭದಲ್ಲಿ ರಾಮಾಯಣ ಮತ್ತು ಮಹಾಭಾರತಗಳ ಜೊತೆಗೆ ಸ್ಥಳೀಯ ವ್ಯಕ್ತಿ ಪುರಾಣಗಳನ್ನು ದೈವೀಕರಿಸಿ ಜನಸಾಮಾನ್ಯರಿಗೆ ತಲುಪಿಸುವ ನಿಟ್ಟಿನಲ್ಲಿ ರಂಗಭೂಮಿಯನ್ನು ರೂಪಿಸಿಕೊಂಡರು. "ರಂಗಭೂಮಿ ಎಂದರೆ ಕಥಾ ವಸ್ತುವೊಂದನ್ನು ಆಯ್ಕೆ ಮಾಡಿಕೊಂಡು ಮಾನವರು ಕಥೆಯಲ್ಲಿನ ಪಾತ್ರಗಳ ಸನ್ನಿವೇಶಗಳಿಗೆ ಧಕ್ಕೆಯಾಗದಂತೆ ವೇಷಭೂಷಣಗಳನ್ನು ಧರಿಸಿ ರಾತ್ರಿ ಪೂರ್ತಿ ಅಭಿನಯಿಸಲು ರೂಪಿಸಿಕೊಂಡ ವೇದಿಕೆಯೇ ರಂಗಭೂಮಿ". ರಂಗಭೂಮಿ ಅನ್ಯಜ್ಞಾನ ಶಿಸ್ತುಗಳೊಂದಿಗೆ ಸಂಬಂಧವನ್ನು ಬೆಸೆದುಕೊಂಡಿದೆ. ಆಧುನಿಕತೆ ಮತ್ತು ನಗರೀಕರಣ ಅಭಿವೃದ್ಧಿಯಾದಂತೆ ರಂಗಭೂಮಿಯು ಸಹ ವಿವಿಧ ಆಯಾಮಗಳಲ್ಲಿ ರೂಪಾಂತರಗೊಂಡಿದೆ. ವಸಾಹತುಶಾಹಿಗಳು ಭಾರತಕ್ಕೆ ಆಗಮಿಸಿ ತಮ್ಮ ಆಡಳಿತವನ್ನು ಪ್ರಾರಂಭಿಸಿದ ನಂತರ ರಂಗಭೂಮಿಯು ಕವಲೊಡೆದು ಬೀದಿನಾಟಕಗಳಾಗಿ ಮರು ರೂಪಾಂತರಗೊಂಡಿವು.

ಪಶ್ಚಿಮ ಬಂಗಾಳದ ಪ್ರಖ್ಯಾತ ನಾಟಕಕಾರ ಮತ್ತು ನಿರ್ದೇಶಕರಾದ 'ಬಾದಲ್ ಸರ್ಕಾರ್' ಅವರ ಪ್ರಕಾರ ಬೀದಿ ನಾಟಕವೆಂದರೆ ಪ್ರೇಕ್ಷಕರು ಟಿಕೆಟ್ ಕೊಂಡು ರಂಗಮಂದಿರಗಳಲ್ಲಿ ನಾಟಕವನ್ನು ನೋಡುವುದನ್ನು ತ್ಯಜಿಸಿ ಸಾರ್ವಜನಿಕ ಸ್ಥಳಗಳಲ್ಲಿ ಬೀದಿಗಳಲ್ಲಿ ಪ್ರದರ್ಶನವಾಗುವ ನಾಟಕಗಳನ್ನು ಬೀದಿನಾಟಕ ಎಂದು ಕರೆಯುತ್ತಾರೆ. ವಸಾಹತುಶಾಹಿಗಳು ಭಾರತದಲ್ಲಿ ತಮ್ಮ ಅನುಕೂಲಕ್ಕೆ ತಕ್ಕಂತೆ ಕಾನೂನುಗಳನ್ನು ಪುನರ್ ಸೃಷ್ಟಿಸಿಕೊಂಡು ಆಡಳಿತದ ಹೆಸರಿನಲ್ಲಿ ಸ್ಥಳೀಯ ಪ್ರಜೆಗಳ ಮೇಲೆ ಹಲವಾರು ಸುಂಕಗಳು, ತೆರಿಗೆಗಳು ಮತು ಶಿಸ್ತುಗಳ ಹೆಸರಿನಲ್ಲಿ ದಬ್ಬಾಳಿಕೆಯನ್ನು ಎಸಗಿದರು. ಇದರಿಂದ ಬೇಸತ್ತ ಬುದ್ಧಿವಂತ ದೇಶಪ್ರೇಮಿಗಳು ಮತ್ತು ಸಾಮಾಜಿಕ ಬದಲಾವಣೆಯನ್ನು ಬಯಸುವ ಹೋರಾಟಗಾರರು ಎನ್.ಜಿ.ಓ.ಗಳು, ಆರೋಗ್ಯ ಮತ್ತು ಕೃಷಿ ಕಾರ್ಮಿಕರು, ವಿದ್ಯಾರ್ಥಿ ಸಂಘಟನೆಗಳು, ರಾಜಕೀಯ ಪಕ್ಷಗಳು, ಧಾರ್ಮಿಕ ಸುಧಾರಕರು, ಮಹಿಳಾ ಸಂಘಟನೆಗಳು ಮತ್ತು ಪರಿಸರ ಸಂರಕ್ಷಣಾ ಸಂಸ್ಥೆಗಳು ಇನ್ನೂ ಹಲವಾರು ಸಂಘ ಸಂಸ್ಥೆಗಳು ರಂಗಭೂಮಿಯೊಂದಿಗೆ ಸಂಬಂಧವನ್ನು ಹೊಂದಿದ್ದು ಚಳುವಳಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ.

ವಸಾಹತುಶಾಹಿಗಳು ಮತ್ತು ಸಮಾಜಘಾತಕರ ವಿರುದ್ಧವಾಗಿ ಕಥೆಗಳನ್ನು ರೂಪಿಸಿ ಜನಸಾಮಾನ್ಯರಲ್ಲಿ ದೇಶಪ್ರೇಮ ಹುಟ್ಟಿಸಲು ಮತ್ತು ವಸಾಹತುಶಾಹಿ ಹಾಗೂ ಶ್ರೀಮಂತ ಜಾತಿಗಳ ದೌರ್ಜನ್ಯಗಳ ಜೊತೆಗೆ ಸಾಮಾಜಿಕ ಸಮಸ್ಯೆಗಳ ಅರಿವು ಮೂಡಿಸುವ ನೆಲೆಯಲ್ಲಿ ಜನಸಮುದಾಯಗಳು ಇರುವ ಸ್ಥಳಗಳಿಗೆ ಬೇಟಿ ನೀಡಿ ನಾಟಕಗಳನ್ನು ಪ್ರದರ್ಶನ ಮಾಡುತ್ತಿದ್ದರು. ಈ ನಾಟಕಗಳಿಂದ ಎಚ್ಚೆತ್ತುಕೊಂಡ ಅದೆಷ್ಟು ಜನಸಾಮಾನ್ಯರು ಸಂಘ ಸಮಸ್ಯೆಗಳಿಗೆ ಸೇರಿಕೊಂಡು ವಸಾಹತುಶಾಹಿಗಳಿಂದ ವಿಮುಕ್ತಿಯನ್ನು ಪಡೆಯಲು ಬಯಸಿದ್ದಲ್ಲದೆ ಚಳುವಳಿಗಳಿಗೆ ಬೆಂಬಲವನ್ನು ನೀಡಿದರು.

ರಂಗಭೂಮಿ ಮತ್ತು ಚಳುವಳಿಗಳು ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ. ಇದರಿಂದ ದೇಶದಲ್ಲಿದ್ದ ಹಲವಾರು ದೌರ್ಜನ್ಯಗಳು ಕಣ್ಮರೆಯಾಗಲು ಸಾಧ್ಯವಾಯಿತು. ರಂಗಕರ್ಮಿಗಳು ಸಮಾಜದಲ್ಲಿ ತಾಂಡವಾಡುತ್ತಿದ್ದ ಸಮಸ್ಯೆಗಳು, ಶೋಷಣೆ ಮತ್ತು ದಬ್ಬಾಳಿಕೆಗೆ ಸಿಕ್ಕಿ ನಲುಗುತ್ತಿದ್ದ ಜನಸಾಮಾನ್ಯರ ಸಾಮಾಜಿಕ ಅಂಶಗಳನ್ನು ವಸ್ತುವಾಗಿಟ್ಟುಕೊಂಡು ನಾಟಕಗಳನ್ನು ರಚಿಸಿದ್ದಲ್ಲದೆ ರಂಗಪ್ರಯೋಗ ಮಾಡಿ ಬೀದಿಬೀದಿಗಳಲ್ಲಿ ಅಭಿನಯವನ್ನು ಮಾಡುತ್ತಿದ್ದರು. ವಸಾಹತುಶಾಹಿಗಳು ಭಾರತಕ್ಕೆ ಆಗಮಿಸುವುದಕ್ಕಿಂತ ಮುಂಚೆ ಮನೋಉಲ್ಲಾಸಕ್ಕಾಗಿ ಅಭಿನಯ ರೂಪವನ್ನು ಪಡೆದುಕೊಂಡಿದ್ದ ನಾಟಕಗಳು ವಸಾಹತುಶಾಹಿಗಳ ಆಗಮನದ ನಂತರ ಚಳುವಳಿ ರೂಪವನ್ನು ಪಡೆದುಕೊಂಡಿದ್ದಾವೆ. ಸ್ವಾತಂತ್ರ ನಂತರ ಭಾರತದ ಸಮಾಜದಲ್ಲಿದ್ದ ಅಸಮಾನತೆಯನ್ನು ಹೋಗಲಾಡಿಸಲು ಹಲವಾರು ಚಳವಳಿಗಳು ನಡೆದಿದ್ದು ರಂಗಭೂಮಿಯ ಬೀದಿನಾಟಕಗಳು ಚಳುವಳಿಯ ಮಾಧ್ಯಮವಾಗಿ ಪ್ರಮುಖ ಕಾರ್ಯ ನಿರ್ವಹಿಸುವೆ.

1942ರಲ್ಲಿ ಸ್ಥಾಪನೆಗೊಂಡ "ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಷನ್"(ಇಪ್ಟಾ) ಎಂಬುದು ಒಂದು ಸಾಮಾಜಿಕ ಬದ್ಧತೆ ಇರುವ ಸಮ ಸಮಾಜದ ಪರಿಕಲ್ಪನೆ ಹೊಂದಿರುವ ಸಾಂಸ್ಕೃತಿಕ ಸಂಘಟನೆ. ಇಪ್ಟಾ ಸಂಘಟನೆ ಜನಸಾಮಾನ್ಯರನ್ನು ಎಚ್ಚರಿಸುವಂತಹ, ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವಂತಹ ನಾಟಕಗಳನ್ನು ಅಭಿನಯಿಸುವ ತಂಡಗಳನ್ನು ಒಳಗೊಂಡಿದೆ. 1947 ನಲ್ಲಿ ಬ್ರಿಟಿಷರ ನೇರ ಆಡಳಿತದಿಂದ ಭಾರತ ಮುಕ್ತಗೊಂಡಾಗ ರಾಷ್ಟ್ರೀಯ ಮಟ್ಟದಲ್ಲಿದ್ದ ಇಪ್ಟಾ 1960 ರಲ್ಲಿ ಸಾಂಸ್ಕೃತಿಕ ಸಾಮ್ರಾಜ್ಯ ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳಲ್ಲಿ ಹಂಚಿಹೋಯಿತು. ಕರ್ನಾಟಕದಲ್ಲಿ "ಜನಕಲಾ ಸಮಿತಿ" ಎಂಬ ಹೆಸರನ್ನು ಪಡೆದುಕೊಂಡಿದ್ದು ಕರ್ನಾಟಕದ ಮೊದಲ ಇಪ್ಟಾ ಸಮಾವೇಶವನ್ನು ಶಿವರಾಮಕಾರಂತರು ಉದ್ಘಾಟನೆ ಮಾಡಿದ್ದಾರೆ. ಅಲ್ಲದೆ 'ದಾದಾ ಕಾಮ್ರೆಡ್' ನಾಟಕವನ್ನು ಮಂಗಳೂರು ಮತ್ತು ಮೈಸೂರುಗಳಲ್ಲಿ ಪ್ರದರ್ಶನ ಮಾಡಿದರು. ನಂತರದ ದಿನಗಳಲ್ಲಿ ನಾಟಕಗಳು

ಬಿಡಿಬಿಡಿಯಾಗಿ ಪ್ರದರ್ಶನಗೊಳ್ಳುತ್ತಲೇ ಬಂದಿದ್ದಾವೆ. 1983ರಲ್ಲಿ ಸಿಪಿಐ ನ ವಿದ್ಯಾರ್ಥಿ ಯುವಜನ ಸಂಘಟನೆಗಳು ವಿಜಯನಗರದ ಉಕ್ಕಿನ ಕಾರ್ಖಾನೆಗಾಗಿ ಬಳ್ಳಾರಿಯ ಸಂಡೂರಿನಿಂದ ಬೆಂಗಳೂರಿಗೆ ಚಳುವಳಿಯ ಮೂಲಕ ಜಾತ ಹೊರಟ ಸಂದರ್ಭದಲ್ಲಿ ದಾರಿಯುದ್ದಕ್ಕೂ 'ವಿಜಯನಗರ ಉಕ್ಕು' ಎಂಬ ಬೀದಿ ನಾಟಕವನ್ನು ಪ್ರದರ್ಶಿಸಿ ಚಳುವಳಿಗೆ ಪುಷ್ಟಿಯನ್ನು ನೀಡಿದ್ದಾರೆ.

ಡಾ. ಸಿದ್ದನಗೌಡ ಪಾಟೀಲರು ರಚಿಸಿ–ನಿರ್ದೇಶಿಸಿದ ರಾಜಕೀಯ ವಿಡಂಬನಾತ್ಮಕ ಬೀದಿ ನಾಟಕ "ಪೊಲೀಸರ ನಾಯಿ" ಮತ್ತು ರೈತರ ಆತ್ಮಹತ್ಯೆ ಕುರಿತಾದ "ಪರಿಹಾರ" ನಾಟಕ, ಬಹುರಾಷ್ಟ್ರೀಯ ಕಂಪನಿಗಳ ಕುತಂತ್ರವನ್ನು ಬಯಲುಮಾಡುವ "ದಿಲ್ ಮಾಂಗೆ ಮೋರ್", ವಿದೇಶಿ ತಂಪು ಪಾನೀಯಗಳ ಅಪಾಯವನ್ನು ತೋರುವ "ಕೋಲಾಹಲ" ಹೀಗೆ ಹಲವಾರು ನಾಟಕಗಳು ಸ್ವಾತಂತ್ರ ಭಾರತದಲ್ಲಿ ಕಾಡುತ್ತಿದ್ದ ಸಮಸ್ಯೆಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಹಿನ್ನೆಲೆಯಲ್ಲಿ ಹೆಚ್ಚು ಪ್ರಭಾವಶಾಲಿಯಾಗಿದ್ದು ಜನಸಾಮಾನ್ಯರು ಚಳುವಳಿಯಲ್ಲಿ ಭಾಗವಹಿಸಲು ಪುಷ್ಟಿ ಮತ್ತು ಪ್ರೇರಣೆಯನ್ನು ನೀಡುವೆ.

ಕಲೆಗಾಗಿ ಕಲೆಯಲ್ಲ ಜನರಿಗಾಗಿ ಕಲೆ ಎನ್ನುವ ರೀತಿಯಲ್ಲಿ ಜನಪರ ಸಿದ್ಧಾಂತದ ಪ್ರತಿಕವಾದ ರಂಗಭೂಮಿ ಚಳುವಳಿಗೆ ಮಾಧ್ಯಮವಾಗಿ ಜನಸಾಮಾನ್ಯರಿಗೆ ಸಾಮಾಜಿಕ ನ್ಯಾಯ ಒದಗಿಸಲು ಪ್ರಯತ್ನಿಸುತ್ತೇವೆ. ಕರ್ನಾಟಕದಲ್ಲಿ 'ಚಿತ್ರ' ತಂಡವು 1974 ರಲ್ಲಿ 'ಕಟ್ಟು' ನಾಟಕದ ಮೂಲಕ ಬೀದಿ ರಂಗಚಳುವಳಿಯನ್ನು ಆರಂಭಿಸಿದ್ದು ಮುಂದೆ ನಾನಾ ಕ್ಷೇತ್ರಗಳಲ್ಲಿ ಬದಲಾವಣೆಗಳುಂಟಾಗಿ ಹಲವು ತಂಡಗಳ ಉಗಮಕ್ಕೆ ಕಾರಣವಾಯಿತು. ಅಲ್ಲದೆ ಪ್ರತಿಯೊಂದು ತಂಡವು ತಮ್ಮದೇಯಾದ ನಿಲುವು ಮತ್ತು ಸಿದ್ಧಾಂತಗಳನ್ನು ರೂಪಿಸಿಕೊಂಡು ಆಯಾ ಆಯಾ ಕ್ಷೇತ್ರಗಳ ಚಳುವಳಿಗಳಿಗೆ ಪ್ರೋತ್ಸಾಹ ನೀಡಿದ್ದಾವೆ. ಕನ್ನಡ ಭಾಷೆಯ ಕುರಿತಂತೆ ನಡೆದ ಭಾಷಾ ಚಳುವಳಿಯ ಸಂದರ್ಭದಲ್ಲಿ ನಾ.ಕೃ.ಸತ್ಯನಾರಾಯಣ ಅವರು ರಚಿಸಿದ 'ಕನ್ನಡವೇ ದೇವರು' ಎಂಬ ನಾಟಕವನ್ನು ಪ್ರತಿಯೊಂದು ಸಭೆ–ಸಮಾರಂಭಗಳಲ್ಲಿ ಪ್ರದರ್ಶನ ಮಾಡಿ ಕನ್ನಡನಾಡಿನ ಅಸ್ಮಿತೆಯನ್ನು ಕಟ್ಟಲು ಪ್ರಯತ್ನಿಸಿದ್ದಾರೆ. ದಲಿತ ಚಳುವಳಿಯ ಸಂದರ್ಭದಲ್ಲಿ ಸಿ.ಜಿ.ಕೆ ಅವರು ಡಾ.ಸಿದ್ದಲಿಂಗಯ್ಯನವರ 'ಅಲ್ಲೇ ಇದ್ದೋರು' ಎಂಬ ನಾಟಕವನ್ನು ಪ್ರದರ್ಶನ ಮಾಡಿಸುತ್ತಿದ್ದರು.

1990ರಂದು ಕರ್ನಾಟಕದಲ್ಲಿ ಪ್ರಾರಂಭಗೊಂಡ "ಜನವಿಜ್ಞಾನ ಮತ್ತು ಸಾಕ್ಷರತಾ ಆಂದೋಲನ" ಎಂಬ ಸಾಂಸ್ಕೃತಿಕ ಸಂಘಟನೆಯ ಮೂಲಕ 'ಸಪ್ದರ್ ಹಶ್ಮಿ' ಅವರು ಕೂಲಿಕಾರ್ಮಿಕರು ಮತ್ತು ದುಡಿಯುವ ವರ್ಗದ ಧ್ವನಿಯಾಗಿ ಕಾರ್ಖಾನೆಯ ಮುಂದೆ "ಹಲ್ಲಾ ಬೋಲ್" ನಾಟಕವನ್ನು ಪ್ರದರ್ಶಿಸುವಾಗ ಗುಂಡಿಕ್ಕಿ ಕೊಲ್ಲುತ್ತಾರೆ. ಇವರ ಸ್ಮಾರಕವಾಗಿ ಸಮಗ್ರತಾ ಉತ್ಸವವನ್ನು ನಡೆಸುವ ಹಿನ್ನೆಲೆಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ, ಕೋಮುಸೌಹಾರ್ದತೆ ಮತ್ತು ರಾಷ್ಟ್ರೀಯ ಸಮಗ್ರತೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಸಂಸ ಬಯಲು ರಂಗಮಂದಿರ ಮತ್ತು ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಹಲವು ಬೀದಿನಾಟಕಗಳನ್ನು ಪ್ರದರ್ಶನ ಮಾಡಲಾಯಿತು.

ಪ್ರಸ್ತುತ ಸಂದರ್ಭದಲ್ಲಿ ನಗರೀಕರಣ ಮತ್ತು ಕೈಗಾರಿಕರಣ ಪರಿಸರದ ಮೇಲೆ ಬೀರುತ್ತಿರುವ ಪ್ರಭಾವ ಮತ್ತು ಪರಿಣಾಮಗಳನ್ನು ಜನಸಾಮಾನ್ಯರಿಗೆ ಅರ್ಥೈಸುವ ಹಿನ್ನೆಲೆಯಲ್ಲಿ ಹಲವಾರು ಸಂಘ–ಸಂಸ್ಥೆಗಳು ಪರಿಸರ ರಕ್ಷಣೆ ಮತ್ತು ಸಂರಕ್ಷಣೆಯ ಕುರಿತಾದ ಹಲವು ನಾಟಕಗಳನ್ನು ಪ್ರದರ್ಶನ ಮಾಡುತ್ತಿದ್ದಾರೆ. ಉದಾ: ಸ್ವಚ್ಛ ಭಾರತ ಅಭಿಯಾನದ ನೆಲೆಯಲ್ಲಿ ಬಿಬಿಎಂಪಿ ಹಲವು ಬೀದಿನಾಟಕಗಳನ್ನು ಬೀದಿ ಬೀದಿಗಳಲ್ಲಿ ಪ್ರದರ್ಶನ ಮಾಡುತ್ತಿದ್ದು ಜನಸಾಮಾನ್ಯರಲ್ಲಿ ಪರಿಸರ ಸಂರಕ್ಷಣೆ ಅರಿವನ್ನು ಮೂಡಿಸಿ ಚಳುವಳಿಯಲ್ಲಿ ಪಾಲ್ಗೊಂಡು ಪರಿಸರ ಸಂರಕ್ಷಣೆಯ ಕಾರ್ಯವನ್ನು ಮಾಡುತ್ತಿರುವುದನ್ನು ನೋಡಬಹುದಾಗಿದೆ. ಅನಾದಿ ಕಾಲದಿಂದಲೂ ಸ್ತ್ರೀಯನ್ನು ಒಂದು ಭೋಗವಸ್ತುವಾಗಿ ಪರಿಗಣಿಸಿದ್ದು ಸ್ವಾತಂತ್ರ ಮತ್ತು ಪ್ರಜಾಪ್ರಭುತ್ವದ ಪ್ರಸ್ತುತ ದಿನಗಳಲ್ಲಿ ಸಂವಿಧಾನಬದ್ಧವಾಗಿ ತಮ್ಮ ಹಕ್ಕುಗಳನ್ನು ಕೇಳುವ ಮತ್ತು ಪಡೆಯುವ ಹಿನ್ನೆಲೆಯಲ್ಲಿ ಅನೇಕ ಮಹಿಳಾ ಪರ ಚಳುವಳಿಗಳು ನಡೆದಿದ್ದು ಈ ಸಂದರ್ಭದಲ್ಲಿ ರಂಗಭೂಮಿ ತಂಡಗಳು ಸ್ತ್ರೀ ಕುರಿತಾದ ಹಲವಾರು ನಾಟಕಗಳನ್ನು ಪ್ರದರ್ಶನ ಮಾಡುತ್ತಿವೆ. ಹೆಣ್ಣಿನ ಸ್ಥಾನಮಾನ, ತಾಳ್ಮೆ, ಅಸಹಾಯಕತೆ, ತಾಯಿತನದ ಬಗ್ಗೆ, ಹೆಣ್ಣಿಗೆ ನೀಡಬೇಕಾದ ಗೌರವ, ಹೆಣ್ಣಿನ ಸಾಧನೆಗಳನ್ನು ರಂಗಭೂಮಿಯು ಪ್ರದರ್ಶನ ಮಾಡುವುದರ ಮೂಲಕ ಹೆಣ್ಣುಗೆ ದಕ್ಕಬೇಕಾದ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಕಲ್ಪಿಸುತ್ತೇವೆ. ದೇಶದ ಬೆನ್ನೆಲುಬು ಹಾಗೂ ದೇಶಾಭಿವೃದ್ಧಿಯ ಮೂಲ ಆದಾಯವಾಗಿರುವ ಜನಸಾಮಾನ್ಯ ರೈತಾಪಿ ವರ್ಗ ಮತ್ತು ಕಾರ್ಮಿಕರ ನೋವಿನ ಕೂಗಿಗೆ ಸರ್ಕಾರ ಸಂಪೂರ್ಣ ಕಿವುಡಾಗಿದೆ. ಅಲ್ಲದೆ ದುಡಿಯುವ ವರ್ಗದ ಹೋರಾಟಗಳನ್ನು ಸರ್ಕಾರ ನಿರ್ದಯವಾಗಿ ದಮನಿಸುತ್ತಿದೆ. ಭಾರತ ಸರ್ಕಾರವು ಬಂಡವಾಳಶಾಹಿ ಮತ್ತು ಕೈಗಾರಿಕೀಕರಣ ಹಾಗೂ ನಗರೀಕರಣಕ್ಕೆ ಒತ್ತು ಕೊಟ್ಟು ರೈತರನ್ನು ಸಮಸ್ಯೆಗಳಿಗೆ ಸಿಲುಕುವಂತೆ ಮಾಡುತ್ತಿದೆ. ಇಂತಹ ರೈತ ವಿರೋಧಿ ಧೋರಣೆಗಳನ್ನು ಹೊಂದಿರುವ ಬಂಡವಾಳಶಾಹಿ ಮತ್ತು ಸರ್ಕಾರದ ದೌರ್ಜನ್ಯವನ್ನು ಹಾಗೂ ರೈತರ ಕಷ್ಟ ನಷ್ಟಗಳನ್ನು ಬೀದಿನಾಟಕ ರಂಗಭೂಮಿ ಅಭಿನಯಿಸುವುದರ ಮೂಲಕ ಚಳುವಳಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ.

ರಂಗಭೂಮಿ ಸಮಾಜದಲ್ಲಿರುವ ಮತ್ತು ಜನರಲ್ಲಿ ಜೀವಂತವಾಗಿ ಉಳಿದಿರುವ ಸಮಸ್ಯೆಗಳನ್ನು ಹಂಚಿಕೊಳ್ಳುವ ಮೂಲಕ ಪರ್ಯಾಯ ಮಾರ್ಗವನ್ನು ಹುಡುಕಿಕೊಳ್ಳಲು ಸಹಕಾರಿಯಾಗಿದೆ. ಸಮಾಜದಲ್ಲಿ ತಲೆಯೆತ್ತುವ ಸಮಾಜಘಾತಕ ಚಟುವಟಿಕೆಗಳ ಅರಿವು ಮೂಡಿಸುವುದು ಮತ್ತು ಆ ಸಮಸ್ಯೆಗಳಿಗೆ ವಿರುದ್ಧವಾಗಿ ಹೋರಾಡುವುದು ಚಳುವಳಿಗಳ ಉದ್ದೇಶವಾಗಿದೆ. ಚಳುವಳಿಯ ಉದ್ದೇಶಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಮಾಧ್ಯಮವಾಗಿ ರಂಗಭೂಮಿ ಕಾರ್ಯನಿರ್ವಹಿಸುತ್ತಿದ್ದು ಉತ್ತಮ ಸಮಾಜ ನಿರ್ಮಾಣಕ್ಕೆ ಕಾರಣಭೂತವಾಗಿದೆ.

ಪರಾಮರ್ಶನಾ ಕೃತಿಗಳು

1. ರಂಗಭೂಮಿ ಮತ್ತು ಚಳುವಳಿ: ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಧ್ವನಿ ಪ್ರಕಾಶನ, ಜ್ಞಾನಗಂಗಾನಗರ ಜ್ಞಾನಭಾರತಿ 2ನೇ ಹಂತ ಬೆಂಗಳೂರು– 560056. 2019
2. ಆಧುನಿಕ ಕನ್ನಡ ನಾಟಕ: ಡಾ. ಕೆ ಮರಳು ಸಿದ್ದಪ್ಪ, ಅಂಕಿತ ಪ್ರಕಾಶನ, ಬಸವನಗುಡಿ, ಬೆಂಗಳೂರು–56004. 2013.
3. ಕನ್ನಡ ರಂಗಭೂಮಿಯ ವಿಕಾಸ: ಡಾಎಚ್.ಕೆ. ರಾಮನಾಥ, ಅಭಿನಯ ಪ್ರಕಾಶನ, ಮೈಸೂರು– 570023.